OCTOBER 14, 2025

# AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಧರ್ತಿ ಬಯೋನೆಸ್ಟ್ ಇಂಕ್ಯುಬೇಶನ್ ಕೇಂದ್ರ;** ಧಾರವಾಡ ಐ.ಐ.ಟಿ.ಯಲ್ಲಿ ಇಂದು ಕೇಂದ್ರ ಹಣಕಾಸು ಖಾತೆ ಸಚಿವರಿಂದ, ಲೋಕಾರ್ಪಣೆ.

**ಕಿತ್ತೂರು ವಿಜಯೋತ್ಸವ;** ಇದೇ 23 ರಿಂದ, ಮೂರು ದಿನಗಳ ಕಾಲ, ಕಿತ್ತೂರು ಕೋಟೆಯಲ್ಲಿ, ಜನೋತ್ಸವ.

**'ನಶೆ ಮುಕ್ತ ಭಾರತ' ಅಭಿಯಾನ;** ಕೊಪ್ಪಳ ಜಿಲ್ಲೆಯ, ಚಿಕ್ಕೇನಕೊಪ್ಪ ಗ್ರಾಮ, ಈಗ ಸಂಪೂರ್ಣ ಮದ್ಯ ಮುಕ್ತ.

**ಮಾಹಿತಿ ಹಕ್ಕು ಕಾಯ್ದೆ ಜಾರಿಗೊಂಡು, ಎರಡು ದಶಕಗಳು ಪೂರ್ಣ;** ಇಂದು ಬೆಂಗಳೂರಿನಲ್ಲಿ, ವಿಶೇಷ ಕಾರ್ಯಕ್ರಮ.

<><><>

**ಧಾರವಾಡದ, ಭಾರತೀಯ ತಂತ್ರಜ್ಞಾನ** ಸಂಸ್ಥೆ, ಐ.ಐ.ಟಿ.ಯ 'ಧರ್ತಿ (ಧಾರವಾಡ ರಿಸರ್ಚ್ ಅಂಡ್ ಟೆಕ್ನಾಲಜಿ ಇಂಕ್ಯುಬೇಟರ) ಬಯೋನೆಸ್ಟ್ ಇನ್‌ಕ್ಯುಬೇಶನ್ ಸೆಂಟರ್'ನ್ನು, ಇಂದು ಸಂಜೆ 5 ಗಂಟೆಗೆ, ಕೇಂದ್ರ ಹಣಕಾಸು ಹಾಗೂ ಕಾರ್ಪೋರೆಟ್ ವ್ಯವಹಾರಗಳ ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್ ಉದ್ಘಾಟಿಸುವರು. ಕೇಂದ್ರ ಹಣಕಾಸು ಖಾತೆ ಸಚಿವರು ತಮ್ಮ, ಸಂಸದರ ಸ್ಥಳೀಯ ಪ್ರಾದೇಶಿಕ ಅಭಿವೃದ್ಧಿ ಯೋಜನೆ ನಿಧಿ ಅಡಿ ಒದಗಿಸಿದ ಅನುದಾನ ಹಾಗೂ ಬೈರ್ರ್ಯಾಕ್ (ಬಯೊಟೆಕ್ನಾಲಜಿ ಇಂಡಸ್ಟ್ರಿ ರಿಸರ್ಚ ಅಸಿಸ್ಟೆನ್ಸ್ ಕೌನ್ಸಿಲ್) ಆವರ್ತನಾ ನಿಧಿ ಅಡಿ ಒಟ್ಟು, 10 ಕೋಟಿ 29 ಲಕ್ಷ ರೂಪಾಯಿ ಹೂಡಿಕೆಯೊಂದಿಗೆ, ಧರ್ತಿ ಬಯೋನೆಸ್ಟ್ ಇನ್‌ಕ್ಯುಬೇಟರ್ ಕಾರ್ಯಾರಂಭಿಸಿದೆ. ಮಾಲಿಕ್ಯೂಲರ ಬಯಾಲಜಿ, ಸೆಲ್ ಕಲ್ಚರ್ ಲ್ಯಾಬ್, ಪ್ರೋಟಿಯೊ ಮಿಕ್ಸ್, ಪ್ರೀ ಕ್ಲಿನಿಕಲ್ ವ್ಯಾಲಿಡೇಶನ್ ಲ್ಯಾಬ್, ಮೆಡ ಟೆಕ್ ಪ್ರೋಟೋ ಟೈಪಿಂಗ್ ಮೊದಲಾದ ಸ್ಟಾರ್ಟ್ ಅಪ್ ಗಳಿಗೆ ನೆಲೆ ಒದಗಿಸಿದೆ. ಧರ್ತಿ ಬಯೋನೆಸ್ಟ್ ಇನ್‌ಕ್ಯುಬೇಶನ್ ಕೇಂದ್ರದ ಕುರಿತು, ಐ.ಐ.ಟಿ. ನಿರ್ದೇಶಕ ವೆಂಕಪ್ಪಯ್ಯ ದೇಸಾಯಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ

<><><>

**ಕೇಂದ್ರ ಹಣಕಾಸು ಖಾತೆ** ಸಚಿವರಾದ ನಿರ್ಮಲಾ ಸೀತಾರಾಮನ್, ಇಂದಿನಿಂದ ನಾಲ್ಕು ದಿನ, ರಾಜ್ಯಕ್ಕೆ ಭೇಟಿ ನೀಡಿ, ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಭಾರತೀಯ ತಂತ್ರಜ್ಞಾನ ಸಂಸ್ಥೆ, ಧಾರವಾಡದ, ಬಯೋನೆಸ್ಟ್ ಇನ್‌ಕ್ಯುಬೇ ॅನ್ ಸೆಂಟರ್ ಉದ್ಘಾಟಿಸಿ, ಐ.ಐ.ಟಿ. ವಿದ್ಯಾರ್ಥಿಗಳೊಂದಿಗೆ, ಸಚಿವರು ಸಂವಾದ ನಡೆಸಲಿದ್ದಾರೆ. ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ, ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ನಾಲ್ಕು ದಿನಗಳ ರಾಜ್ಯ ಭೇಟಿಯಲ್ಲಿ ನಿರ್ಮಲಾ ಸೀತಾರಾಮನ್, ಕೊಪ್ಪಳ, ರಾಯಚೂರು, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ, ರೈತ ತರಬೇತಿ ಕೇಂದ್ರಗಳು ಹಾಗೂ ಕೃಷಿ ಸಂಸ್ಕರಣಾ ಘಟಕಗಳನ್ನು ಉದ್ಘಾಟಿಸಲಿದ್ದಾರೆ. ಹಂಪಿಯ ವಿರೂಪಾಕ್ಷ ದೇವಾಲಯ ಹಾಗೂ ಬಳ್ಳಾರಿ ಜಿಲ್ಲೆ, ಬಾಗೇವಾಡಿ ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕೆ ಭೇಟಿ ನೀಡಲಿದ್ದಾರೆ.

<><><>

**ವೀರರಾಣಿ ಕಿತ್ತೂರು ಚನ್ನಮ್ಮನವರ,** ಬ್ರಿಟಿಷರ ವಿರುದ್ಧದ, ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಹಾಗೂ ವೀರೋಚಿತ ಗೆಲವನ್ನು ಸ್ಮರಿಸುವ, ಕಿತ್ತೂರು ವಿಜಯೋತ್ಸವ ನಿಮಿತ್ತ, ಕಿತ್ತೂರು ಉತ್ಸವ, ಈ ತಿಂಗಳ 23ನೇ ತಾರೀಖಿನಿಂದ, ಮೂರು ದಿನಗಳ ಕಾಲ, ಕಿತ್ತೂರಿನ ಕೋಟೆ ಆವರಣದಲ್ಲಿ, ಜನೋತ್ಸವವಾಗಿ, ವಿಜೃಂಭಣೆಯಿಂದ ಜರುಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸೌಧದ ಮುಂಭಾಗದಲ್ಲಿ, ಕಿತ್ತೂರು ವಿಜಯಜ್ಯೋತಿ ಯಾತ್ರೆಗೆ ಚಾಲನೆ ನೀಡಿದ್ದಾರೆ. ಉತ್ಸವದ ಪೂರ್ವಭಾವಿಯಾಗಿ ವಿಜಯಜ್ಯೋತಿ ರಥ ಇಂದು ಮಧ್ಯಾಹ್ನ 3.30ಕ್ಕೆ, ಹಾವೇರಿಯಿಂದ ಗದಗ ಜಿಲ್ಲೆಗೆ ಆಗಮಿಸಲಿದೆ. ಗದಗ ನಗರ ಪ್ರದಕ್ಷಿಣೆ ಬಳಿಕ, ಐತಿಹಾಸಿಕ ಹಾಗೂ ಪಾರಂಪರಿಕ ತಾಣ, ಲಕ್ಕುಂಡಿ ಗ್ರಾಮಕ್ಕೆ ತೆರಳಲಿದೆ. ಬಳಿಕ, ಕೊಪ್ಪಳ, ವಿಜಯನಗರ ಮಾರ್ಗವಾಗಿ, ಹಂಪಿಗೆ ತಲುಪಲಿದೆ.

**<><><>**

**ಕೇಂದ್ರ ರೇಲ್ವೆ ಮತ್ತು ಜಲಶಕ್ತಿ** ಖಾತೆ, ರಾಜ್ಯ ಸಚಿವ ವಿ.ಸೋಮಣ್ಣ, ಬೆಂಗಳೂರಿನ ಕಬ್ಬನ್ ಪಾರ್ಕ್‌ನ, ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ, ಇಂದು ಬೆಳಗ್ಗೆ, ಮಾನವ ಕಳ್ಳ ಸಾಗಣೆ ವಿರೋಧಿ ಕಾರ್ಯಗಾರ ಉದ್ಘಾಟಿಸಲಿದ್ದಾರೆ. ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ವಿಜಯಾ ರಹಾಟ್ಕರ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

**<><><>**

**ವಿಧಾನಸಭಾ ಅಧ್ಯಕ್ಷ** ಯು.ಟಿ ಖಾದರ್ ಹಾಗೂ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು, ಬಾರ್ಬಡೋಸ್ ದೇಶದ ಸಂಸತ್ತಿಗೆ ಭೇಟಿ ನೀಡಿದರು. ಬಾರ್ಬಡೋಸ್ ನಲ್ಲಿ ಆಯೋಜಿತ 68ನೇ ಅಂತಾರಾಷ್ಟ್ರೀಯ ಕಾಮನವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ತೆರಳಿರುವ, ಉಭಯರು, ಅಲ್ಲಿನ ಶಾಸಕಾಂಗದ ಕಾರ್ಯ ನಿರ್ವಹಣೆ, ಅಂತರ್ ಸಂಸದೀಯ ಸಂಬಂಧಗಳನ್ನು ತಿಳಿಯಲು, ಮಹತ್ವದ ಅವಕಾಶ ಒದಗಿಸಿತು, ಎಂದಿದ್ದಾರೆ.

<><><>

**'ನಶೆ ಮುಕ್ತ ಭಾರತ' ಅಭಿಯಾನದಡಿ,** ಮದ್ಯ, ಮಾದಕ ವಸ್ತು ಹಾಗೂ ತಂಬಾಕು ಉತ್ಪನ್ನಗಳ ಬಳಕೆ ವಿರುದ್ಧ, ಯುವಜನತೆಯ ಆರೋಗ್ಯದ ಮೇಲೆ ಬೀರುವ ಅಡ್ಡ ಪರಿಣಾಮಗಳ ಕುರಿತು, ಜನ ಜನಜಾಗ್ರತಿ ಅಭಿಯಾನ ರಾಜ್ಯಾದ್ಯಂತ ಜರುಗುತ್ತಿದೆ. **ಮಹಾತ್ಮ ಗಾಂಧೀಜಿ ಅವರ** ವಿಚಾರ ಪ್ರಣೀತ, ಮದ್ಯಮುಕ್ತ, ಸ್ವಾವಲಂಬಿ ಹಾಗೂ ಗ್ರಾಮೋತ್ಥಾನ ಭಾರತದ ಕನಸಿನ ಮಾದರಿಯಾಗಿ, ಕೊಪ್ಪಳ ಜಿಲ್ಲೆಯ, ಕುಕನೂರು ತಾಲೂಕು, ಚಿಕ್ಕೇನಕೊಪ್ಪ ಗ್ರಾಮ, ಈಗ ಸಂಪೂರ್ಣ ಮದ್ಯ ಮುಕ್ತ ಗ್ರಾಮವಾಗಿದೆ. ಸಾಮುದಾಯಿಕ ಸಹಭಾಗಿತ್ವದಲ್ಲಿ, ಸಮಷ್ಟಿಹಿತದಡಿ, ಗ್ರಾಮಸ್ಥರೇ ಮದ್ಯ ಮಾರಾಟ ಮತ್ತು ಮದ್ಯ ಸೇವನೆಯನ್ನು, ಚಿಕ್ಕೇನಕೊಪ್ಪ ಗ್ರಾಮದಲ್ಲಿ ಸಂಪೂರ್ಣ ಕಡಿವಾಣ ಹಾಕಿ, ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ. ಗ್ರಾಮಸ್ಥರ ಇಚ್ಛಾಶಕ್ತಿಯ ಕುರಿತು, ಈಶಪ್ಪ ಒಕ್ಕಳದ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಮಾಹಿತಿ ಹಕ್ಕು ಕಾಯಿದೆ ಜಾರಿಗೊಂಡು,** 20 ವರ್ಷಗಳು ಪೂರ್ಣಗೊಂಡ ಹಿನ್ನೆಲೆ, **ಕರ್ನಾಟಕ ಮಾಹಿತಿ** ಆಯೋಗ, ಇಂದು ಬೆಳಗ್ಗೆ 11 ಗಂಟೆಗೆ, ಬೆಂಗಳೂರು ಯುವನಿಕ ಸಭಾಂಗಣದಲ್ಲಿ, ವಿಶೇಷ ಕಾರ್ಯಕ್ರಮ ಆಯೋಜಿಸಿದೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎ ಹ್ಯಾರಿಸ್ ಪಾಲ್ಗೊಳ್ಳಲಿದ್ದಾರೆ.

<><><>

**'ದುರಂತ ಮತ್ತು ತುರ್ತು ಪರಿಸ್ಥಿತಿಯಲ್ಲಿ,** ಮಾನಸಿಕ ಆರೋಗ್ಯ ಹಾಗೂ ಸೇವೆಗಳಿಗೆ ಆದ್ಯತೆ' ಧ್ಯೇಯದೊಂದಿಗೆ, ಮಾನಸಿಕ ಆರೋಗ್ಯ ವಿಶ್ವ ಸಂಘಟನೆ, ಸಮುದಾಯಗಳಿಗೆ ಮಾನಸಿಕ ಆರೋಗ್ಯ ಒದಗಿಸಿ, ಮನೋಬಲ ಧೃಡೀಕರಿಸುವ ಗುರಿ ಹೊಂದಿದೆ. ಧಾರವಾಡ ಜಿಲ್ಲಾಡಳಿತ, ವಿಶ್ವ ಮನೋ ಆರೋಗ್ಯ ದಿನಾಚರಣೆ ಅಂಗವಾಗಿ, ಜನ ಜಾಗ್ರತಿ ಜಾಥಾ ಆಯೋಜಿಸಿದೆ. ಇಂದು ಬೆಳಗ್ಗೆ 9:30 ಕ್ಕೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ಆವರಣದಲ್ಲಿ, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಭುವನೇಶ ಪಾಟೀಲ ಜಾಥಾಕ್ಕೆ ಚಾಲನೆ ನೀಡಲಿದ್ದಾರೆ.

<><><>

**ಮಂಗಳೂರಿನಲ್ಲಿ ನಿಧನರಾದ,** ಧಾರವಾಡ ರಂಗಾಯಣ ನಿರ್ದೇಶಕ, ರಾಜು ತಾಳಿಕೋಟೆ, ಅವರ ಪಾರ್ಥಿವ ಶರೀರದ ಸಾರ್ವಜನಿಕ ದರ್ಶನಕ್ಕೆ, ಇಂದು ಬೆಳಗ್ಗೆ 7 ಗಂಟೆಯಿಂದ, 8 ಗಂಟೆ ವರೆಗೆ, ಧಾರವಾಡ ರಂಗಾಯಣದ ಸುವರ್ಣ ಸಾಂಸ್ಕೃತಿಕ ಸಮುಚ್ಛಯ ಆವರಣದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವ್ಯವಸ್ಥೆ ಮಾಡಿದೆ. ಅಂತ್ಯಕ್ರಿಯೆ ಇಂದು ಮಧ್ಯಾಹ್ನ, ವಿಜಯಪುರ ಜಿಲ್ಲೆ, ಸಿಂದಗಿ ತಾಲೂಕು, ಚಿಕ್ಕಸಿಂದಗಿಯಲ್ಲಿ ಜರುಗಲಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ, ಅನೇಕ ಗಣ್ಯರು, ಹಿರಿಯ ಕಲಾವಿದರು ಕಂಬನಿ ಮಿಡಿದಿದ್ದಾರೆ.

<><><>

**'ಉತ್ತಮ ವಿಶ್ವಕ್ಕಾಗಿ, ಹಂಚಿಕೊಳ್ಳೋಣ:** ಸುಸ್ಥಿರ ಅಭ್ಯುದಯಕ್ಕಾಗಿ, ಗಮನ ಸೆಳೆದು, ಗುರಿ ಸಾಧನೆಗಾಗಿ ಪಾಲುದಾರರಾಗೋಣ' ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ಮಾನದಂಡಗಳ ದಿನಾಚರಣೆ. ಕೈಗಾರಿಕೆ, ಸಂಸ್ಥೆ ಹಾಗೂ ಆಡಳಿತದ ನಡುವೆ, ಖಾಸಗಿ ಸಹಭಾಗಿತ್ವ ಮತ್ತು ಪಾಲುದಾರಿಕೆಯನ್ನು ಉತ್ತೇಜಿಸಲು, ಈ ದಿನ ಮೀಸಲಿದೆ. ಕಲಬುರಗಿಯ ವಾಣಿಜ್ಯೋದ್ಯಮ ಸಂಘದ ಸಭಾಂಗಣದಲ್ಲಿ, ವಿಶ್ವ ಮಾನದಂಡಗಳ ದಿನಾಚರಣೆ ಅಂಗವಾಗಿ, ಪಾಲುದಾರರ ಸಮಾವೇಶ ಜರುಗಿತು.

<><><>

**ಧಾರವಾಡ ಜಿಲ್ಲೆಯಲ್ಲಿ ಬೆಳೆಹಾನಿ** ಸಮೀಕ್ಷೆಯನ್ನು ಪೂರ್ಣಗೊಳಿಸಲಾಗಿದ್ದು, ಅರ್ಹ ಫಲಾನುಭವಿ ರೈತರ ಹೆಸರುಗಳನ್ನು ಪರಿಹಾರ ಪೋರ್ಟಲ್ ನಲ್ಲಿ ದಾಖಲಿಸಲಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ, ಮಾಸಿಕ ಪ್ರಗತಿ ಪರಿಶೀಲನಾ ಸಭೆಯ, ಅಧ್ಯಕ್ಷತೆ

ವಹಿಸಿ, ಅವರು ಮಾತನಾಡಿದರು. ಅಂದಾಜು 97 ಸಾವಿರ ಹೆಕ್ಟರ್ ಪ್ರದೇಶದ ಬೆಳೆ ಹಾನಿಗೆ ಒಟ್ಟು 85 ಕೋಟಿ ರೂಪಾಯಿ ಮೊತ್ತದ ಪರಿಹಾರ ಅಗತ್ಯವಿದೆ ಎಂದರು. ಈಗಾಗಲೇ 22 ಕೋಟಿ ರೂಪಾಯಿ ಪರಿಹಾರ ಹಣ ಬಿಡುಗಡೆ ಆಗಿದೆ; ಹಂತ ಹಂತವಾಗಿ, ರೈತರ ಖಾತೆಗಳಿಗೆ ಜಮೆಯಾಗಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಧರ್ತಿ ಬಯೋನೆಸ್ಟ್ ಇಂಕ್ಯುಬೇಶನ್ ಕೇಂದ್ರ;** ಧಾರವಾಡ ಐ.ಐ.ಟಿ.ಯಲ್ಲಿ ಇಂದು ಕೇಂದ್ರ ಹಣಕಾಸು ಖಾತೆ ಸಚಿವರಿಂದ, ಲೋಕಾರ್ಪಣೆ.

**ಕಿತ್ತೂರು ವಿಜಯೋತ್ಸವ;** ಇದೇ 23 ರಿಂದ, ಮೂರು ದಿನಗಳ ಕಾಲ, ಕಿತ್ತೂರು ಕೋಟೆಯಲ್ಲಿ, ಜನೋತ್ಸವ.

**'ನಶೆ ಮುಕ್ತ ಭಾರತ' ಅಭಿಯಾನ;** ಕೊಪ್ಪಳ ಜಿಲ್ಲೆಯ, ಚಿಕ್ಕೇನಕೊಪ್ಪ ಗ್ರಾಮ, ಈಗ ಸಂಪೂರ್ಣ ಮದ್ಯ ಮುಕ್ತ.

**ಮಾಹಿತಿ ಹಕ್ಕು ಕಾಯ್ದೆ ಜಾರಿಗೊಂಡು, ಎರಡು ದಶಕಗಳು ಪೂರ್ಣ;** ಇಂದು ಬೆಂಗಳೂರಿನಲ್ಲಿ, ವಿಶೇಷ ಕಾರ್ಯಕ್ರಮ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ**

<><><>